# ವ್ಯವಸ್ಥೆ ಚಿಕ್ಕದಾದರೂ ಸಂದೇಶ ದೊಡ್ಡದು

## ಸೌರ ಶಕ್ತಿ ಆಧಾರಿತ ಹಾಲುಣಿಸುವ ಕೊಠಡಿ ಉದ್ಘಾಟಿಸಿ ಎಸಿ ರಾಹುಲ್ ಅಭಿಪ್ರಾಯ

■ ವಿಜಯವಾಣಿ ಸುದ್ದಿಜಾಲ ಕುಮಟಾ

ಇಲ್ಲಿನ ತಾಲೂಕು ಆಸ್ಪತ್ರೆಯಲ್ಲಿ ಸೆಲ್ಕೋ ಸೋಲಾರ್ ಮತ್ತು ರೋಟರಿ ಕ್ಲಬ್ ಸಹಯೋಗದಲ್ಲಿ ಸಜ್ಜುಗೊಳಿಸಲಾದ ರಾಜ್ಯದಲ್ಲೇ ಪ್ರಥಮ ಸೌರ ಶಕ್ತಿ ಆಧಾರಿತ ಮಕ್ಕಳ ಹಾಲುಣಿಸುವ ಕೊಠಡಿಯನ್ನು ಶುಕ್ರವಾರ ಉಪವಿಭಾಗಾಧಿಕಾರಿ ರಾಹುಲ್ ಪಾಂಡೆ ಉದ್ಘಾಟಿಸಿದರು.

ಬಳಿಕ ಮಾತನಾಡಿ, ಇದೊಂದು ಚಿಕ್ಕ, ಸರಳ ವ್ಯವಸ್ಥೆಯಾದರೂ ಈ ಮೂಲಕ ಸಮಾಜಕ್ಕೆ ದೊರೆಯುವ ಸಂದೇಶ ದೊಡ್ಡದಿದೆ. ಮಹಿಳೆಯರಿಗೆ ಗೌರವ ನೀಡುವ ವ್ಯವಸ್ಥೆಯ ಭಾಗವಾಗಿ ಹಾಲುಣಿಸುವ ಕೊಠಡಿ ಅತ್ಯಂತ ಮಹತ್ವದ್ದಾಗಿದೆ. ಇಂಥ ಹಾಲುಣಿಸುವ ಕೊಠಡಿಗಳು ಮಹಿಳೆಯರಿಗೆ ಅಗತ್ಯವಿರುವ ಎಲ್ಲ ಸಾರ್ವಜನಿಕ ಪ್ರದೇಶಗಳಲ್ಲಿ ಅಳವಡಿಕೆಯಾಗಬೇಕು. ಹಾಲುಣಿಸುವ ಕೊಠಡಿಯನ್ನು ಮರುಬಳಕೆಯ ಇಂಧನವಾದ ಸೌರಶಕ್ತಿಯಿಂದ ಸಜ್ಜುಗೊಳಿಸಿದ ಪರಿಕಲ್ಪನೆ ಶ್ಲಾಘನೀಯ ಎಂದರು.

ರೋಟರಿ ಕ್ಲಬ್ ಅಧ್ಯಕ್ಷೆ ಡಾ. ನಮ್ರತಾ ಶಾನಭಾಗ ಮಾತನಾಡಿ, ಮಾತೆಯರಿಗೆ ಸಾರ್ವಜನಿಕ ಸ್ಥಳಗಳಲ್ಲಿ ಹಾಲುಣಿಸುವುಕ್ಕೆ ಉಂಟಾಗುವ ಮುಜುಗರ ತಪ್ಪಿಸುವುದಕ್ಕೆ ಉಪಯುಕ್ತವಾದ ವ್ಯವಸ್ಥೆ ಇದಾಗಿದೆ ಎಂದರು.

ಸೆಲ್ಕೋ ಸೋಲಾರದ ಹಿರಿಯ ಕಾರ್ಯಕ್ರಮ ವ್ಯವಸ್ಥಾಪಕಿ ಸುರಭಿ ರಾಜಗೋಪಾಲ ಮಾತನಾಡಿ, ಇಂದಿನ ಕಾಲಘಟ್ಟದಲ್ಲಿ ಕರೊನಾ ಹಾಗೂ ಇತರ ಸವಾಲುಗಳನ್ನು ಎದುರಿಸಿ ಸಮಾಜದಲ್ಲಿ ಸೌರಶಕ್ತಿಯ ಮಹತ್ವ ಹಾಗೂ ವ್ಯಾಪಕತೆಯ ಅಗತ್ಯತೆಯನ್ನು ದಾಖಲಿಸುತ್ತಾ ಮುನ್ನಡೆಯುವುದು ನಮ್ಮ ಗುರಿಯಾಗಿದೆ. ಈ ನಿಟ್ಟಿನಲ್ಲಿ ಸೌರಶಕ್ತಿ ಆಧಾರಿತ ಹಾಲುಣಿಸುವ ಕೊಠಡಿಯೊಂದು ಮಾದರಿ ಯೋಜನೆಯಾಗಿದೆ. ಇದೇ ರೀತಿ ಜನರ ಅಗತ್ಯತೆಗಳಿಗೆ ತಕ್ಕ ಸೌಲಭ್ಯಗಳ ಪೂರೈಕೆಗೆ ಸೆಲ್ಕೋ ಸದಾ ಚಿಂತನೆ ನಡೆಸುತ್ತಿರುತ್ತದೆ ಎಂದರು.

ಕೆವಿಜಿ ಬ್ಯಾಂಕ್ ಶಾಖಾ ವ್ಯವಸ್ಥಾಪಕಿ ಶಿಲ್ಪಾ ಮಹಾಲೆ, ಸೆಲ್ಕೋದ ಡಿಜಿಎಂ ಗುರುಪ್ರಕಾಶ ಶೆಟ್ಟಿ, ನಾಗರಾಜ ಜೋಶಿ ಮಾತನಾಡಿದರು. ತಾಲೂಕಾಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಗಣೇಶ ನಾಯ್ಕ, ಸೆಲ್ಕೋದ ಶೇಖರ ಶೆಟ್ಟಿ, ರೋಟರಿ ಕಾರ್ಯದರ್ಶಿ ಶಿಲ್ಪಾ ಜಿನರಾಜ, ಎಂ.ಬಿ. ಪೈ, ಸುರೇಶ ಭಟ್, ಜಿ.ಎಸ್. ಹೆಗಡೆ ಇನ್ನಿತರರು ಇದ್ದರು.




ವಿಜಯವಾಣಿ ಚಿತ್ರ

ಸೌರಶಕ್ತಿ ಆಧಾರಿತ ಮಕ್ಕಳ ಹಾಲುಣಿಸುವ ಕೊಠಡಿಯನ್ನು ಉಪವಿಭಾಗಾಧಿಕಾರಿ ರಾಹುಲ್ ರತ್ನಂ ಪಾಂಡೆ ಶುಕ್ರವಾರ ಉದ್ಘಾಟಿಸಿದರು. ಡಾ. ನಮ್ರತಾ ಶಾನಭಾಗ, ಗುರುಪ್ರಕಾಶ ಶೆಟ್ಟಿ, ನಾಗರಾಜ ಜೋಶಿ, ಡಾ. ಗಣೇಶ ನಾಯ್ಕ ಇನ್ನಿತರರು ಇದ್ದರು.

### ರಾಜ್ಯದಲ್ಲೇ ಮೊದಲು...

ಇದು ಸೌರ ಶಕ್ತಿ ಆಧಾರಿತವಾಗಿದ್ದು, ಕುಮಟಾದ ರೋಟರಿ ಕ್ಲಬ್‌ನ ಸಹಕಾರದೊಂದಿಗೆ ಸೆಲ್ಕೋ ಫೌಂಡೇಷನ್ ಬೆಂಗಳೂರು ಇದನ್ನು ನಿರ್ಮಿಸಿದೆ. ಈ ಕೊಠಡಿಗೆ 5 ವಾಟ್ ಸಾಮರ್ಥ್ಯದ ಎರಡು ಸೌರ ದೀಪಗಳನ್ನು ಅಳವಡಿಸಲಾಗಿದ್ದು, ಇದು ಎಲ್ಲ ಸಮಯದಲ್ಲೂ ತಾಯಂದಿರು ಮಗುವಿಗೆ ಹಾಲುಣಿಸಲು ಅನುಕೂಲವಾಗಲಿದೆ. 82 ಸಾವಿರ ರೂ ವೆಚ್ಚದಲ್ಲಿ ನಿರ್ಮಿಸಲಾದ ಈ ಕೊಠಡಿಯಲ್ಲಿ ಸೌರಶಕ್ತಿ ಚಾಲಿತ ಒಂದು ಫ್ಯಾನ್ ಅನ್ನೂ ಅಳವಡಿಸಲಾಗಿದೆ. ಜತೆಗೆ ಹಾಲುಣಿಸುವುದಕ್ಕೆ ಅನುಕೂಲವಾದ ಆಸನ ವ್ಯವಸ್ಥೆಯೂ ಇದ್ದು, ಇದು ತಾಯಿ-ಮಗುವಿನೊಂದಿಗೆ ಆರಾಮವಾಗಿ ಕುಳಿತುಕೊಳ್ಳಲು ಅನುವು ಮಾಡಿಕೊಡುತ್ತದೆ. ಚಿಕ್ಕ ಮಕ್ಕಳ ತಾಯಂದಿರಿಗೆ ಸಾರ್ವಜನಿಕ ಸ್ಥಳಗಳಲ್ಲಿ ಮಕ್ಕಳಿಗೆ ಹಾಲುಣಿಸುವ ಮುಜುಗರವನ್ನು ತಪ್ಪಿಸುವ ಸಲುವಾಗಿ ಸರ್ಕಾರಿ ಆಸ್ಪತ್ರೆಗಳು, ಬಸ್ ನಿಲ್ದಾಣಗಳು, ದೇವಸ್ಥಾನಗಳು ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಇಂಥ ಹಾಲುಣಿಸುವ ಕೊಠಡಿಗಳು ಹೆಚ್ಚು ಬಳಕೆಗೆ ಬರಬೇಕಾಗಿದೆ.